ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೩ನೇ ಜುಲೈ ೧೯೯೦, ಆಷಾಢ ೧೨, ಶಕ ೧೯೧೨

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೫ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು].

ಜಿಲ್ಲೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

MR. SPEAKER.—Mr Blasius D' Souza, I think I have receiv d a communication from the Chief Minister about Question No. 417 (1319) that he needs some more time to collect the data. Perhaps, we should be able to take it up sometime next week.

SRI BLASIUS D' SOUZA.—Last week also one question was held over.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೇ, ಈ ಅಂಡರ್‌ಗ್ರೌಂಡ್ ಡ್ರೈನೇಜ್ ಪೈಪ್ ಲೈನು ಕನೆಕ್ಟ್ ಮಾಡದೆ ಪರ್ಫಾಸುಗಟ್ಟಲೆ ನಿಧಾನ ಮಾಡಿರುವುದರಿಂದ ಈ ವಿಭಾಗದಲ್ಲಿರುವ ಸುಮಾರು ಎರಡು ಲಕ್ಷ ಜನರಿಗೆ ತೊಂದರೆಯಾಗುತ್ತಿದೆ. ಈ ಒಂದು ಪ್ರಪೋಸಲ್ ಪ್ರಾರಂಭ ಮಾಡಿದಾಗಿನಿಂದ, ಅಲ್ಲಿಯ ಸುಮಾರು ೪೦೦ ಮಂಜಿಗೆಗಳವರಿಗೆ ಯಾವ ತರಹ ಅವರನ್ನು ಅಲ್ಲಿಂದ ಬೇರೆ ಕಡೆಗೆ ಕಳಿಸಬೇಕು, ಏನು ಮಾಡಬೇಕು, ಯಾವ ತರಹ ಆರ್ಥಿಕ ಪರಿಹಾರ ಏನು ಕೊಡಬೇಕು, ಸ್ಥಳಾಂತರ ಮಾಡಿದರೆ ಏನು ಮಾಡಬೇಕೆಂಬ ಬಗ್ಗೆ ಯಾವ ಯೋಜನೆಯನ್ನು ಇಟ್ಟುಕೊಂಡು. ಈ ಪ್ರಪೋಸಲ್ ಅನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದೀರಿ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮುಖ್ಯ ಮಂತ್ರಿಗಳ ಪರವಾಗಿ).—ದಯವಿಟ್ಟು ಮತ್ತೊಮ್ಮೆ ಪ್ರಶ್ನೆ ಕೇಳಿ.

ಶ್ರೀ ಎ.ಕೆ. ಅನಂತಕೃಷ್ಣ.—ಸ್ವಾಮಿ, ಅಲ್ಲಿ ೪೦೦ ಅಂಗಡಿಗಳಿವೆ. ಈ ಅಂಗಡಿಗಳ ಕೆಳಗಡೆಯಿಂದ ಪೈಪ್‌ಲೈನ್ ಹೋಗಬೇಕಾಗಿದೆ. ಅಂಗಡಿಗಳ ಕೆಳಗಡೆಯಿಂದ ಪೈಪ್‌ಲೈನ್ ಹಾಕಬೇಕೆಂದು ಹೇಳಿದರೆ ಒಳಚರಂಡಿ ಮಾಂಡಳಿಯವರಾಗಲೀ, ನಗರಪಾಲಿಕೆಯವರಾಗಲೀ, ಈ ಅಂಗಡಿಯವರನ್ನು ಏನು ಮಾಡಬೇಕು? ಸ್ಥಳಾಂತರ ಮಾಡಬೇಕೇ ಅಥವಾ ಅವರನ್ನ ಒದ್ದು ಓಡಿಸಬೇಕೇ ಎಂದು ಯಾವ ತರಹ ಯೋಚನೆ ಮಾಡಿದ್ದೀರಿ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇದರ ಬಗ್ಗೆ ತೀವ್ರವಾಗಿ ಈಗ ಆಲೋಚನೆ ಮಾಡಲಾಗಿದೆ ಸುಮಾರು ೪೦ ವರ್ಷಗಳಿಂದಲೂ ಈ ಅಂಗಡಿಗಳು ಇವೆ. ಇವರನ್ನು ಸ್ಥಳಾಂತರ ಮಾಡುವುದು ದೊಡ್ಡ ಸಮಸ್ಯೆ ಆಗಿದೆ. ಇವರು ಎಲ್ಲರೂ ಖಾಲಿ ಮಾಡದ ಹೊರತು ಒಳಚರಂಡಿ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅರ್ಥವಾಗಿ ಈಗಾಗಲೇ ಒಳಚರಂಡಿ ಮಂಡಲಿಯವರಿಗೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಅವರಿಗೆ ಸ್ಥಳಾಂತರ ಮಾಡಿ ಬೇರೆ ವ್ಯವಸ್ಥೆ ಮಾಡುವವರೆಗೆ, ಸ್ವಲ್ಪ ಇದು ಸ್ಥಗಿತ ವಾಗಿರುವುದು ನಿಜ. ಆದಷ್ಟು ಬೇಗ ಅವರನ್ನು ಸ್ಥಳಾಂತರ ಮಾಡಿ ಒಳಚರಂಡಿ ಕೆಲಸವನ್ನು ಮುಂದುವರೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಕೆ. ಆನಂತಕೃಷ್ಣ.—ಮಾನ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕು, ಆಲ್ಲಿಯ ಪೈಪ್ ಲೈನ್ ಲಿಂಕ್ ಮಾಡದೇಹೋದರೆ ಟಾಸ್ಕ್‌ಫೋರ್ಸ್. ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್ ವಿಭಾಗ ಏನಿದೆ, ಅಲ್ಲಿರುವ ಸುಮಾರು ಎರಡು ಲಕ್ಷ ಜನಸಂಖ್ಯೆ ಏನಿದೆ. ಅವರಿಗೆ ತುಂಬಾ ಕಷ್ಟವಾಗುತ್ತದೆ. ಇದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಆದರೆ ಅಲ್ಲಿ ಗಲ್ಲಿಗಲ್ಲಿಯಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜ್‌ನಿಂದ ಸೀಪರೇಜ್ ವಾಟರ್ ಓವರ್‌ಫ್ಲೋ ಆಗುತ್ತಿರುತ್ತದೆ. ಈಗ ಮಳೆಗಾಲ ಬೇರೆ ಪ್ರಾರಂಭವಾಗಿದೆ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇದರಿಂದ ಖಾಯಿಲೆ ಕಸಾಲೆಗಳು ಜಾಸ್ತಿಯಾಗುತ್ತವೆ. ದಯವಿಟ್ಟು ಈ ವಿಷಯದಲ್ಲಿ ನಗರಪಾಲಿಕೆಯವರಾಗಲೀ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮಂಡಳಿಯವರಾಗಲೀ, ಮೊದಲಿನಿಂದ ಯಾವುದಾದರೂ ಒಂದು ತ್ವರಿತವಾದ ಯೋಜನೆಯನ್ನು ಹಾಕಿಕೊಳ್ಳಬೇಕಾಗಿತ್ತು. ಅದನ್ನು ಹಾಕಿಕೊಳ್ಳದೆ ಇದುವರೆಗೂ ಅವರನ್ನು ಸ್ಥಳಾಂತರ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೀರಿ. ಅವರನ್ನು ಸ್ಥಳಾಂತರ ಮಾಡದೆ ಪೈಪ್ ಲೈನು ಹಾಕದೇ ಹೋದರೆ ಅಲ್ಲಿ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತದೆ ಆದ್ದರಿಂದ ಈ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅವರನ್ನು ಸ್ಥಳಾಂತರ ಮಾಡಬೇಕಾಗಿರುತ್ತದೆ. ಸ್ಥಳಾಂತರ ಮಾಡಬೇಕಾಗಿದ್ದರೆ ಅವರಿಗೆ ಆರ್ಥಿಕವಾಗಿ ಯಾವ ನೆರವನ್ನು ಕೊಡುತ್ತೀರಿ? ಬೇರೆ ಯಾವ ಜಾಗದಲ್ಲಿ ಅನುಕೂಲತೆ ಮಾಡಿಕೊಡುತ್ತೀರಿ? ಇದನ್ನೆಲ್ಲಾ ಯೋಚನೆ ಮಾಡದೆ ಈ ಯೋಜನೆಯನ್ನು ಹೇಗೆ ಹಾಕಿಕೊಂಡಿದ್ದೀರಿ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಈ ೪೦೦ ಅಂಗಡಿಗಳಿಂದ ಬಡವರು ಏನು ಜೀವನ ಮಾಡುತ್ತಿದ್ದಾರೆ, ಅದರನ್ನು ಸ್ಥಳಾಂತರ ಮಾಡುವುದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಆದ್ಯತೆ ಮೇರೆಗೆ ಇತ್ಯರ್ಥಗೊಳಿಸಬೇಕಾಗಿದೆ. ಒಳಚರಂಡಿ ವ್ಯವಸ್ಥೆ ಅಗತ್ಯವಾಗಿದೆ. ನಾಗರೀಕರಿಗೆ ಇದಕ್ಕಿಂತಲೂ ಬೇರೆ ಮೂಲಭೂತ ಸೌಕರ್ಯ ಮತ್ತೊಂದು ಇಲ್ಲವೆಂದು ತಿಳಿದುಕೊಂಡು, ಈಗಾಗಲೇ ಇದರ ಬಗ್ಗೆ ಬಹಳಷ್ಟು ಆದ್ಯತೆ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ತಮ್ಮ ಚಿಂತನೆಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ.

ಶ್ರೀ ಎ. ಕೆ. ಆನಂತಕೃಷ್ಣ.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಅದು ನನ್ನ ಮನಸ್ಸಿಗೆ ಒಪ್ಪಿಗೆಯಾಗಿಲ್ಲ. ನಾನು ಹೇಳುತ್ತಿರುವುದು, ಅವರನ್ನು ಸ್ಥಳಾಂತರ ಮಾಡಬೇಕೆಂದು ಹೇಳುವವರಲ್ಲಿ ನಾನು ಕೂಡ ಒಬ್ಬ. ಸ್ಥಳಾಂತರ ಮಾಡಬೇಕು ಎನ್ನುವುದಾದರೆ ಯಾವುದಾದರೂ ಒಂದು ಯೋಜನೆ ಹಾಕಿಕೊಳ್ಳಬೇಕಾಗಿರಲಿಲ್ಲವೆ? ನಗರ ಪಾಲಿಕೆಯವರಾಗಲೀ, ನೀರು ಸರಬರಾಜು ಮಂಡಳಿಯವರಾಗಲೀ ಅದು ಮಾಡಬೇಕು, ಕಷ್ಟ ಇದೆ ಎಂದು ಹೇಳುತ್ತಾ ಇದ್ದರೆ, ಈಗಾಗಲೇ ವರ್ಷಗಳು ಕಳೆದುಹೋಗಿವೆ. ಈಗ ಮಳೆಗಾಲ ಬಂದಾಗಿದೆ. ಅಲ್ಲಿ ಒಳಚರಂಡಿ ವ್ಯವಸ್ಥೆ ಸರಿಯಾಗಿ ಇಲ್ಲ. ಒಳಚರಂಡಿ ನೀರು ಹೆಚ್ಚು ಫ್ಲೋ ಆಗುತ್ತಿದೆ. ಈ ರೀತಿಯಾದರೆ, ಆ ಕ್ಷೇತ್ರದಲ್ಲಿ ನಾವು ಜನಗಳನ್ನು ಹೇಗೆ ಎದುರಿಸಬೇಕು, ಯಾವರೀತಿ ಜನರ ಮನಸ್ಸನ್ನು ಒಲಿಸಿಕೊಳ್ಳಬೇಕು. ಅಲ್ಲಿ ಒಳಚರಂಡಿ ಆಗತ್ಯ ಇದೆ. ಈಗ ಬಂದಿರತಕ್ಕ ಪ್ರಶ್ನೆ ಏನೆಂದರೆ, ಆ ೪೦೦ ಮಳಿಗೆಗಳವರನ್ನು ಸ್ಥಳಾಂತರ ಮಾಡಬೇಕಾದರೆ ಯಾವ ಯೋಜನೆ ಇದೆ? ಎಷ್ಟು ದಿವಸ ಯೋಜನೆ ಹಾಕಿಕೊಳ್ಳುತ್ತೀವೆಂದು ಹೇಳುತ್ತಾ ಕಾಲ ತಳ್ಳುವುದಕ್ಕಾಗುತ್ತದೆ ಮತ್ತೆ ವಾಟರ್ ಸಪ್ಲೈ ಬೋರ್ಡಿನವರಿಗೂ ಮತ್ತು ಬೆಂಗಳೂರು ನಗರ ಪಾಲಿಕೆಯವರಿಗೂ ಯಾವುದೇ ರೀತಿಯ ಒಡಂಬಡಿಕೆ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅಲ್ಲಿ ಒಳಚರಂಡಿ ವ್ಯವಸ್ಥೆ ಬಹಳ ಆಗತ್ಯ ಇದೆ. ಮಾನ್ಯ ಸದಸ್ಯರು ಹೇಳಿರತಕ್ಕ ಎಲ್ಲಾ ಸಮಸ್ಯೆಗಳನ್ನೂ ಅರ್ಥಮಾಡಿಕೊಂಡಿದ್ದೇವೆ. ಬೆಂಗಳೂರು ಮಹಾನಗರ ಪಾಲಿಕೆ ಅವರು ಮತ್ತು ಒಳಚರಂಡಿ ಸಂಸ್ಥೆ ಇದಕ್ಕೆ ಏನಾದರೊಂದು ವ್ಯವಸ್ಥೆ ಕಂಡುಹಿಡಿದು ಆದ್ಯತೆ ಮೇಲೆ ಮಾಡಬೇಕೆಂದು ಇದ್ದಾರೆ: ಆದ್ದರಿಂದ ಮಾನ್ಯ ಸದಸ್ಯರು ಸಹ ಇದಕ್ಕೆ ಸಹಕರಿಸಬೇಕು.

ಶ್ರೀ ಎ. ಕೆ. ಆನಂತಕೃಷ್ಣ.—ಇದುವರೆಗೂ ಏಕೆ ಮಾಡಿಲ್ಲ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಮಸ್ಯೆ ಇದೆ. ಚಿಂತನೆ ಮಾಡುತ್ತಿದ್ದೇವೆ, ಮಾನ್ಯ ಸದಸ್ಯರು ಪ್ರತ್ಯೇಕವಾಗಿ ನನ್ನ ಹತ್ತಿರ ಮಾತನಾಡಲಿ, ಇನ್ನೂ ಹೆಚ್ಚಿನ ರೀತಿಯಲ್ಲಿ ಅಧಿಕಾರಿಗಳನ್ನು ಕರೆಯಿಸಿ, ಯಾವ ರೀತಿಯಲ್ಲಿ ಇದನ್ನು ಸರಿಪಡಿಸಬೇಕೋ, ಆ ರೀತಿ ಮಾಡುತ್ತೇವೆ.

ಶ್ರೀ ಎ. ಕೆ. ಆನಂತಕೃಷ್ಣ.—ಆವರಿಗೆ ಆರ್ಥಿಕ ನೆರವು ಕೊಟ್ಟು ಬೇರೆ ಕಡೆ ಸ್ಥಳಾವಕಾಶ ಮಾಡಿಕೊಟ್ಟರೆ ಮಾತ್ರ ಆಗಂತ್ತದೆ. ಟೈಮ್ ಕೇಳಿದ್ದಾರೆ. ಮುಂದಿನ ವಾರ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಆಗಬಹುದು ಪ್ರಶ್ನೆ ೪೨೩ (೧೩೪೦) ಕ್ಕೆ